REPRESENTATIONS

SRI S.M. SHEERNALLI CHANDRASHEKAR.—Sir, I have given a breach of privilege notice against Sri S.R. Bommai.....

(INTERRUPTION)

SRI C.M. ARUMUGHAM.—Mr. Speaker Sir.....

(INTERRUPTION)

ಶ್ರೀ ಭೀಮಣ್ಣ ಎಸ . ಖಂಡ್ರೆ.—ಸ್ವಾಮಿ, ನಾನು ಒಂದು ಕಾಲಿಂಗ್ ಅಟೆನ್‌ಷನ್ ನೋಟೀಸ್ ಕೊಟ್ಟಿದ್ದೆ. ಕನ್ನಡಿಗರಾದ ಡಾ॥ ಸಿದ್ಧನಾಥೆರವರು ಭಾರತದ ಪ್ರಧಾನ ಮಂತ್ರಿಯಂವರಿಗೆ ಒಂದು ನೋಟೀಸ್ ಕೊಟ್ಟಿದ್ದಾರೆ. ಆಗಸ್ಟ್ ೧೫ರ ಒಳಗೆ ಮಹಾರಾಷ್ಟ್ರದಲ್ಲಿ ಕನ್ನಡ ಶಾಲೆಗಳಿಗೆ ಮತ್ತು ಕನ್ನಡಿಗರಿಗೆ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳದಿದ್ದರೆ ಅಮರಣಾಂತ ಸತ್ಯಾಗ್ರಹ ಮಾಡುವುದಾಗಿ ಹೇಳಿದ್ದಾರೆ. ಇಲ್ಲಿ ಕಳೆದ ೨೫ ವರ್ಷಗಳಿಂದಲೂ ಕನ್ನಡ ಶಾಲೆಗಳನ್ನು ಕ್ಲೋಸ್ ಮಾಡುತ್ತಿದ್ದಾರೆ. ನೂರಾರು ಜನ ಎಂ.ಎಲ್.ಎಗಳು ನಮ್ಮ ಮಾನ್ಯ ಮುಖ್ಯಮಂತ್ರಿಯವರಿಗೆ ಕೂಡ ಈ ಬಗ್ಗೆ ಮನವಿ ಮಾಡಿದ್ದಾರೆ. ತಾವು ಮಹಾರಾಷ್ಟ್ರ ಮುಖ್ಯಮಂತ್ರಿಗಳ ಜೊತೆ ಸಮಾಲೋಚನೆ ಮಾಡಿ. ಅಲ್ಲಿ ಕನ್ನಡಿಗರಿಗೆ ಮತ್ತು ಕನ್ನಡ ಶಾಲೆಗಳಿಗೆ ಆಗುತ್ತಿರುವ ಅನ್ಯಾಯವನ್ನು ತಪ್ಪಿಸುವುದಕ್ಕೆ ಆಗಸ್ಟ್ ೧೫ರೊಳಗೆ ತೀರ್ಮಾನ ತೆಗೆದುಕೊಳ್ಳದೇ ಹೋದರೆ ಬಹಳ ಕೆಟ್ಟ ಪರಿಣಾಮವನ್ನು ಎದುರಿಸಬೇಕಾಗುತ್ತದೆ.

"ಧ್ಯಕ್ಷರು.—ತಾವು ನಿನ್ನೆ ಅದನ್ನು ಕೊಟ್ಟಿದ್ದೀರಿ, ನಾನು ಸರ್ಕಾರಕ್ಕೆ ಕಳುಹಿಸಿದ್ದೇನೆ. ಇವತ್ತು ಮಾನ್ಯ ಮುಖ್ಯ ಮಂತ್ರಿಯವರು ಬಂದಿಲ್ಲ. ಮಾನ್ಯ ಹಣಕಾಸಿನ ಮಂತ್ರಿಯವರು ಬೇರೆ ಕೆಲಸಕ್ಕೆ ಹೋಗಿದ್ದಾರೆ. ಸರ್ಕಾರ ಅದನ್ನು ನೋಡಿ ಉತ್ತರ ಹೇಳಬೇಕಾಗುತ್ತದೆ.

ಶ್ರೀ ಭೀಮಣ್ಣ ಖಂಡ್ರೆ.—ಸ್ವಾಮಿ, ಕಳೆದ ೨೫ ವರ್ಷಗಳಿಂದ ಈ ಒಂದು ಅನ್ಯಾಯ ಸತತವಾಗಿ ನಡೆದುಕೊಂಡು ಬರುತ್ತಿದೆ. ಈ ವಿಷಯವನ್ನು ಆದ್ಯತೆ ಕೊಟ್ಟು ಮಹಾರಾಷ್ಟ್ರ ಮುಖ್ಯಮಂತ್ರಿಯಂವರ ಜೊತೆ ಮಾತನಾಡಿ ಬಗೆಹರಿಸಬೇಕು ಇಲ್ಲದೇ ಹೋದರೆ ದೊಡ್ಡ ಆಘಾತವಾಗುತ್ತದೆ.

SRI G.B. SHANKAR RAO.—Sir, I will bring it to the notice of the Hon. Chief Minister.

SRI C.M. ARUMUGHAM.—Sri, the other day we raised an issue segarding the fasting of the students of the University of Agricultural Sciences.....

MR. SPEAKER —I think the hon. Agriculture Minister has made a statement on it...

SRI C. M. ARUMUGHAM.—Sir, already they are on 15th or 16th day; some students have been hospitalised. The Hon. Minister for Co-operation has said that the Government will cosider their demands.

MR. SPEAKER.—He also made an appeal to withdraw their hunger strike.

SRI C. M. ARUMUGHAM.—He said, the Government will discuss that issue and they will form a Committee under the chairman ship of the Chief Secretary and allow them to consider and take a decision. In the meantime what has happened? The Minister of contro-

versy Sri Kagodu Thimmappa has said on the floor of the upper House that the workers are not agitating, the students are agitating. So, this statement of Sri Kagodu thimmappa has diluted the assurance given by the Minister for Co-operation. Let us not allow it. Their demand is, parity of pay scales with the other technocrats serving in Animal Husbandry and Agriculture Departments. Has the Government considered the cases of Animal Husbandry Department; I do not know how? That is the reason why we are asking pay scales on par with them. Though the Narayan Pai Commission has said that they all should be treated alike, you have increased the pay structure of the Animal Husbandry Department, why? What are the reasons? On the same reasons, you must consider the demands of the agricultural graduates. On the contrary statement made by the Hon. Minister Sri Kagodu Thimmappa, the students are agitating and they are pressing for their demands. Don't be so rigid; their demands are genuine and very reasonable. They are asking for a minimum hike in their pay structure. So, please say what are you going to do. Don't allow them to go on an indefinite hunger strike. After this Assembly adjourns *Sine die* nobody cares for them. The police will lathi charge and put them behind bars. They have not come here to be beaten by the police; they have not come here to go to jail. They have come here to put before you their genuine demands. I once again request you to consider their genuine demands

SRI S R. BOMMAI.—Before coming to the House, I had discussions with the Chief Minister. The Chief Minister has assured me to make a statement on the floor of the House on this issue. He had discussions with the representatives of the students. After he comes to the House, let him make his statement assuring or granting their pay scales.

SRI H.C. SRIKANTAIAH.—On that day itself I made that point clear. Now, as the Hon. Member Sri Bommai has put it the Chief Minister has promised those boys to consider their demands and asked them to stop their fasting. If they stop their fasting strike, then the Government will consider it. It takes sometime for the Government to examine everything in detail.

(INTERRUPTION)

MR. SPEAKER.—As the Hon. Minister Sri Kagodu Thimmappa has made a statement in the Council, which amounts to some sort of a policy statement, the students are agitated...

SRI H.C. SRIKANTAIAH.—That will be made clear by the Hon, Chief Minister now. He had promised that he is going to make a statement on this issue.

MR. SPEAKER.—I request the hon. Member Sri B.B. Sayanak to raise his point.

SRI B.B. SAYANAK.—Sir, in Belgaum two days back there was a heavy rainfall, with the result about 100 houses have collapsed in Gandhinagar and Shastrinagar. So, I want the Hon. Minister to make a statement on the floor of this House giving compensation to the victims and starting relief works.

SRI M. MALLIKARJUNA KHARGE —Sir, I have received a telex from the Deputy Commissioner, Belgaum which reads thus:

> "There is a Nala called 'Bellary Nala' in Tilakwadi area in Belgaum, which for the most part of the year is fully dry. During rainy season every year some water normally flows through this nala. It would appear that this year due to heavy rains on 22nd July 1982 there were floods in this nala resulting in some little damage to the dwelling houses situated adjacent in lying area. Except for two houses, the damage has not been very much, which may require some minor repairs. Some of the families have been shifted to the school building and others have gone back to their houses".

As the water has since receded, the Deputy Commissioner has assured me that there has been no casualities of any critical nature and all those who had been exposed to floods and damage are quiet happy with the measures taken by the local officers. I have also again requested the Deputy Commissioner to take action and give relief to the victims.

SRI B.B. SAYANAK.—Sir, Bellary nala is a different place. It is not passing through the City. I got information from my brother that lot of damages have been caused in Gandhinagar and Shastri nagar areas.

MR. SPEAKER.—The hon. Minister for Revenue may get it verified and give relief measures. You may contact the Belgaum Deputy Commissioner over telephone.

SRI M. MALLIKARJUNA KHARGE.—Sir, there were some damages also in Gandhinagar, Shastrinagar and Kalyan nagar. The Deputy Commissioner is attending the relief operations Further information reads thus:

> "It has been reported that due to heavy rainfall on 9th in Belgaum City certain low-lying areas were waterlogged. The areas were Shastrinagar, Kalyannagar and some places behind the Aruna Talkies in Tilakwadi area.

In many areas water had rushed into the houses. They are giving relief. The Deputy Commissioner is attending the relief works. Money has been given to the victims''.

SRI B.B. SAYANAK.—Sir, this statement is not correct

MR. SPEAKER.—What is not correct? He says the Deputy Commissioner is looking into the matter and relief works are being taken up. The information supplied to the House is from the Deputy Commissioner, Belgam. What more you want?

SRI S.M. SHEERNALLI CHANDRASHEKAR.—Sir, eight days back I had given a notice of privilege against the Hon. Member Sri S R Bommai. There are two important committees dealing with finance in this House, i.e., Estimates Committee and Public Accounts Committee, SRI S.R. Bommai is the Chairman of the Public Accounts Committee. While dealing with the Audit Report for year 1975-76 and 1979-80, he has given a report regarding losses incurred by the Forest Department. My humble submission to your honour is, it is the duty of the Estimates Committee to deal with the day to day affairs of the Government.

MR. SPEAKER,—Please read the rules.

SRI S.M SHEERNALLI CHANDRASHEKAR.—Sir, the public Accounts Committee can only post-mortem the issue i e., what all the A.G. has placed before them, has to be dealt by them. *Suo motu* they cannot deal with any issue. I know the PAC chairman may argue that while dealing with the accounts for the year 1979-80 this issue has arisen and that is why we have given the report. In case of the report dealing with the cement, the same argument was put-forth by him. Repeatedly, the Chairman of the Public Accounts Committee is transgressing the rules of the Committee.

MR. SPEAKER.—I would like to be enlightened by the Hon. Law Minister on this issue. Please wait till he comes. You can raise it afterwards,

SRI C.M. ARUMUGHAM.—To any question pertaining to the functioning of the Committee, the Speaker is the authority.

MR. SAEAKER—As a Minister for Parliamentary affairs I want his help.

SRI C.M. ARUMUGHAM.— Whatever you say that is final. I submit to you...

MR. SPEAKER.—Why should I not take his help.

SRI C.M. ARUMUGHAM.—For taking his help, individually you can consult him in your chambers.

MR. SPEAKER.—Mr. Arumugham, please bear with me for a minute. The hon. Member is also the Chairman of the Estimates Committee. He has given the notice of privilege against the Chairman of another Committee, who is also a member of this house. It is a very big issue and also a ticklish issue. In fact, it has come in the way of established conventions of this house. We are supposed not to interfere with some of these things or go to the extent of giving notices. But, anyway he has given the notice, he is entitled to do it and he is within his rights. Whether it attracts rule 117 or whether it is a privilege motion, all these matters will have to be looked into. But, anyway, I would like to have the help of the Minister for Law and Parliamentary Affairs.

SRI C.M. ARUMUGHAM.—My submission is, the functions of the Hon. Speaker is...

MR. SPEAKER.—I am aware of all these things. Sometimes, when I am in difficulty I can get help from Ministers. I can also even get help from you.

SRI C.M. ARUMUGHAM:—The difficulty is when you conduct the House and when the Government and Opposition Members come into conflict, you can take the help of any Member or the Minister. But, this question is exclusively left to the discretion of the Hon. Speaker He raised the privilege issue against the Chairman of the PAC; you can take a decision on it. In fact, raising of privilege motions against one Chairman of the Committee by Chairman of another Committee and all that was not there all these years. I leave it to you. What is the jurisdiction of the Estimates Committee or PAC and any another Committee, how they function. all these issues have to decided by you. These are all your duties

MR. SPEAKER.—Do you still contend that I am wrong in getting help from the Law Minister even if it is not there in the rules. Is it wrong?

SRI C.M. ARUMUGHAM.—Not at all. If you want, you can. But, why do you want it unnecessarily create a precedent, where the Government to come to the rescue.

MR. SPEAKER.—I wanted to know from him as to what he can say on this matter. It is very delicate thing.

SRI S.R. BOMMAI —After the Law Minister's say. I may be given a chance to have my say.

MR. SPEAKER.—Mr. Bommai, you are further complicating the issue.

10-30 A.M.

SRI P. RAMDEV:—Recently the High Court has given one judgement in which it has passed some strictures against the highest police officer in the State. In another stricture, the High Court has said that he has failed in his duty to discharge his duties properly. There is also a proposal to give extension to that officer.

MR. SPEAKER:—You give a separate notice about it.

SRI S.R. BOMMAI:—It is very important question here. The High Court has passed strictures against him.

MR. SPEAKER.—They pass strictures even in lower courts also.

SR S.R. BOMMAI:—On the base of the strictures made against the highest police officer for acting in a vindictive way in transferring a particular officer who is honest, bonafide in the course of discharging his functions without any fear or favour, that must be gone into by the Government and suitable action should be taken; that is our view.

SRI P. RAMDEV.—Not only that, but also he has failed to discharge his duties by not disclosing all the facts in the Court. The conduct of the highest officer is involved.

SRI A. LAKSHMISAGAR.—One sentence in the judgement for which the Government should take serious note of it and i.e., 'the officer has not been fair to the court'. Though the language is mildly touched. I expect the State Government to take serious note of it and initiate suitable action against highest officer who is involved in this case. That is the point. That is the reason why we are trying to draw the attention of the Government.

SRI P. RAMADEV.—The Judgement has also dealt elaborately the Indian Penal Code, All India Service Code and other things. We have been agitating here that the upright officers in the Police Department should be protected. Unfortunately it is not being done. The High Court also agrees with it. ತಾವು ಸರ್ಕಾರಕ್ಕೆ ಹೇಳಬೇಕು. ಸರ್ಕಾರ ಅವರಿಗೆ ಎಕ್ಸ್‌ಟೆನ್‌ಷನ್ ಕೊಡಬೇಕು ಎಂದಿದೆ. ಆ ರೀತಿ ಆಗಬಾರದು ಎಂಹುದುನನ್ನ ಮನವಿ.

ಶ್ರೀಮತಿ ಅನಸೂಯ ಗಜಾನನ ಶರ್ಮ.—ಮಾನ್ಯ ಅಧ್ಯಕ್ಷರೇ ಕಾರವಾರದಲ್ಲಿ ನೆರೆಹಾವಳಿ ಆಗಿದೆ ಎಂದು ಇವತ್ತಿನ ಪತ್ರಿಕೆಯಲ್ಲಿ ಬಂದಿದೆ.

ಶ್ರೀ ಎಸ್. ಬಂಗಾರಪ್ಪ.—ಈ ವಿಷಯವನ್ನು ಮಾನ್ಯ ಸದಸ್ಯರು ಆಮೇಲೆ ಅಧ್ಯಕ್ಷರ ಅನುಮತಿ ಪಡೆದು ಪ್ರಸ್ತಾಪ ಮಾಡಬಹುದು. ಅದು ಬೇರೆ ವಿಷಯವಾದ್ದರಿಂದ ಅದನ್ನು ಆಮೇಲೆ ಪ್ರಸ್ತಾಪ ಮಾಡಿ. ಶ್ರೀ ಕೃಷ್ಣಮೂರ್ತಿ ಅವರ ವಿಷಯದಲ್ಲಿ ಹೈಕೋರ್ಟಿನವರು ಜಡ್ಜ್‌ಮೆಂಟ್ ಕೊಟ್ಟಿದ್ದಾರೆ, ಮತ್ತು ಸ್ಟ್ರಿಕ್ಚರ್ಸ್ ಪಾಸ್ ಮಾಡಿದ್ದಾರೆ ಎಂಬ ವಿಷಯವನ್ನು ಪ್ರಸ್ತಾಪ ಮಾಡಿದರು. ಮಾನ್ಯ ಅಧ್ಯಕ್ಷರಿಗೆ ಗೊತ್ತು, ಅದು ಮೈಲ್ಡ್ ಆಗಿ ಇರಬಹುದು ಅಥವಾ ಸ್ಟ್ರಾಂಗ್ ಆಗಿ ಇರಬಹುದು, ಅದು ಬೇರೆ ವಿಷಯ. Those strong words have been used by the court. But the

Government has to take note of the net result of such observation by the court.

MR. SPEAKER —Why do you presume that they will not take note of it ?

ಶ್ರೀ ಎಸ್. ಬಂಗಾರಪ್ಪ.—ಸರ್ಕಾರದ ಪರವಿಯಿಂದ ನಮಗೆ ಒಂದು ಹೇಳಿಕೆ ಬರಬೇಕು. ನ್ಯಾಯಾಲಯದಿಂದ ತೀರ್ಪಾನ ಬಂದಮೇಲೆ ಆ ರೀತಿ ತಪ್ಪುಗಳಾಗಿದ್ದರೆ ಆ ತಪ್ಪುನ್ನು ಸರಿಪಡಿಸುತ್ತೇವೆ, ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂಬ ಹೇಳಿಕೆಯನ್ನು ಸರ್ಕಾರದವರು ಕೊಡ ಬೇಕಾಗುತ್ತದೆ ಇಲ್ಲದಿದ್ದರೆ ಹೈಕೋರ್ಟ್ ಜಡ್ಜ್‌ಮೆಂಟ್ ಏತಕ್ಕೆ ಬರಬೇಕು, ಸ್ಪೀಕರ್ಸ್ ಏತಕ್ಕೆ ಪಾಸ್ ಮಾಡಬೇಕು ? After taking so many matters into consideration the Court will have passed that judgement. ಇದನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಈ ವಿಷಯದಲ್ಲಿ ಸರ್ಕಾರದ ಹೇಳಿಕೆಯನ್ನು ನಿರೀಕ್ಷೆ ಮಾಡುತ್ತೇವೆ. ಏತಕ್ಕೆ ಆ ರೀತಿ ತಪ್ಪು ನಡೆದಿದೆ, ಏತಕ್ಕೆ ಅನ್ಯಾಯವಾಗಿದೆ ಎಂಬುದು ಸದನಕ್ಕೆ ಗೊತ್ತಾಗಬೇಕು. ಆ ಬಗ್ಗೆ ಪತ್ರಿಕೆಗಳಲ್ಲಿ ಹಲವಾರು ವಿಷಯಗಳು ಪ್ರಕಟವಾಗಿವೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನಮಗೆ ಜಡ್ಜ್‌ಮೆಂಟ್ ಕಾಪಿ ಬಂದಿಲ್ಲ. ವಿಷಯ ಗೊತ್ತಾಗಿಲ್ಲ. ಬಂದಮೇಲೆ ಪರಿಶೀಲನೆಗೆ ತೆಗೆದುಕೊಳ್ಳಬಹುದು. ಸದ್ಯಕ್ಕೆ ಏನು ಹೇಳುವುದಕ್ಕಾಗುತ್ತದೆ ? ಪತ್ರಿಕೆಯಲ್ಲಿ ಆ ವಿಷಯ ಬಂದಿದೆ. ಆದರಲ್ಲಿ ಕಂಟೆಂಟ್ಸ್ ಏನಿದೆ ಎಂಬುದನ್ನು ನೋಡಬೇಕು We have to study the actual direction given by the Court. Then, we will examine it and proper action will be taken.

ಶ್ರೀ ಎಚ್.ಎಲ್. ತಿಮ್ಮೇಗೌಡ.—ಸರ್ಕಾರದವರು ಸೀರಿಯಸ್ಸಾಗಿ ತೆಗೆದುಕೊಳ್ಳುವುದಿಲ್ಲ ಎಂದಂ ಏತಕ್ಕೆ ಭಾವಿಸುತ್ತೀರಿ ಎಂದು ಮಾನ್ಯ ಅಧ್ಯಕ್ಷರು ಹೇಳಿದರು. ನಾವು ಏತಕ್ಕೆ ಆ ರೀತಿ ಭಾವಿಸುತ್ತೇವೆ ಎಂದರೆ.....

ಅಧ್ಯಕ್ಷರು. —ನೀವೇ ಯೋಚನೆ ಮಾಡುವುದು, ನೀವೇ ಊಹೆ ಮಾಡಿಕೊಳ್ಳುವುದು, ನೀವೇ ಉತ್ತರ ಕೊಡುವುದು, ಇದು ಸರಿಯಲ್ಲ.

ಶ್ರೀ ಎಚ್.ಎಲ್. ತಿಮ್ಮೇಗೌಡ.—ಶ್ರೀ ವಿಜಯದೇವರಾಜ ಅರಸರು.....

ಅಧ್ಯಕ್ಷರು.—ನೀವೇ ಶಂಕೆ ಪಟ್ಟುಕೊಳ್ಳುವುದು, ನೀವೇ ಪ್ರಶ್ನೆ ಹಾಕಿಕೊಳ್ಳುವುದು, ಮತ್ತೆ ನೀವೇ ಶಂಕೆ ಪಟ್ಟುಕೊಳ್ಳುವುದು.....

ಶ್ರೀ ಎಚ್.ಎಲ್. ತಿಮ್ಮೇಗೌಡ.—ನಾನು ಕಾರಣ ಹೇಳುತ್ತಿದ್ದೇನೆ.

ಅಧ್ಯಕ್ಷರು.—ನನಗೆ ಅರ್ಥವಾಯಿತು. ಸರ್ಕಾರ ನಮಗೆ ಜಡ್ಜ್‌ಮೆಂಟ್ ಪ್ರತಿ ಬಂದಿಲ್ಲ ಎಂದು ಹೇಳುತ್ತಿದೆ, ಬಂದಮೇಲೆ ನೋಡೋಣ ಎಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ.

ಶ್ರೀ ಎಚ್.ಎಲ್. ತಿಮ್ಮೇಗೌಡ.—ಹಿಂದೆ ಕೋರ್ಟಿನವರು ಡೈರೆಕ್ಟರ್ ಜನರಲ್ ಆಫ್ ಪೋಲೀಸ್ ಅವರ ವಿಚಾರದಲ್ಲಿ ಶ್ರೀ ವಿಜಯದೇವರಾಜ ಅರಸ್ ಅವರು ಅರ್ಜಿ ಹಾಕಿಕೊಂಡಿದ್ದಾಗ ಅದನ್ನು ಸೀರಿಯಸ್ಸಾಗಿ ಕನ್‌ಸಿಡರ್ ಮಾಡಬೇಕು ಎಂದಾಗ ಸರ್ಕಾರದವರು ಅದನ್ನು ಗಮನಕ್ಕೆ ತೆಗೆದುಕೊಳ್ಳ ದಿದ್ದರಿಂದ ಅವರು ಕಂಟೆಂಪ್ಟ್ ಆಫ್ ಕೋರ್ಟ್ ಕೇಸ್ ಹಾಕಿದ್ದಾರೆ.....

ಅಧ್ಯಕ್ಷರು.—ತಾವು ಪ್ರಸ್ತಾಪ ಮಾಡಿದ್ದೀರಿ. ನಿನ್ನೆಯೇ ಹೇಳಿದ್ದೀರಿ. ಅಜೆಂಡಾ ಬಹಳ ಇದೆ. ನಾವು ಮುಂದಿನ ಕಾರ್ಯಕಲಾಪವನ್ನು ನಡೆಸಬೇಕು. ಆದ್ದರಿಂದ ದಯವಿಟ್ಟು ಹೆಚ್ಚಿಗೆ ಪ್ರಸ್ತಾಪ ಮಾಡುವುದು ಬೇಡ.

ಶ್ರೀ ಎಚ್.ಎಲ್. ತಿಮ್ಮೇಗೌಡ.—ಸರ್ಕಾರದವರು ಸೀರಿಯಸ್ಸಾಗಿ ತೆಗೆದುಕೊಳ್ಳುವ ಹಾಗಿದ್ದರೆ ಸರಿ.

MR. SPEAKER.—They have taken note of it.

ಶ್ರೀಮತಿ ಅನಸೂಯ ಗಜಾನನ ಶರ್ಮ.—ಮಾನ್ಯ ಅಧ್ಯಕ್ಷರೇ, ಕಾರವಾರ ತಾಲ್ಲೂಕಿನಲ್ಲಿ ನೆರೆ ಹಾವಳಿ ಜಾಸ್ತಿಯಾಗಿದೆ. ಕಾಳಿನದಿಯಲ್ಲಿ ನೀರು ಬಂದಿದೆ. ಹೋದವರ್ಷ ಹೊನ್ನಾವರ ಮತ್ತು ಅಂಕೋಲದಲ್ಲಿ ಆಯಿತು. ಈ ವರ್ಷ ಇಲ್ಲಿ ಆಗಿದೆ. ಈ ಬಗ್ಗೆ ಸರ್ವೆ ಮಾಡಿ ನೆರೆ ಹಾವಳಿ ಬಗ್ಗೆ ಶಾಶ್ವತವಾದ ಕ್ರಮವನ್ನು ಸರ್ಕಾರದವರು ತೆಗೆದುಕೊಳ್ಳಬೇಕು.

ಶ್ರೀ ಎಸ್.ಎಂ. ಶಿರ್ನಾಳಿ ಚಂದ್ರುಶೇಖರ್.—ನಾನು ಪ್ರಿವಿಲೇಜ್ ನೋಟೀಸ್ ಜೊತೆಗೆ ರೂಲ್ ೨೫೬ರ ಪ್ರಕಾರ ಒಂದು ನೋಟೀಸ್ ಕೊಟ್ಟಿದ್ದೆ.

ಅಧ್ಯಕ್ಷರು.—ಮಾನ್ಯ ಕಾನೂನು ಮಂತ್ರಿಗಳಿಲ್ಲ. ಅವರು ಬರಲಿ.

ಶ್ರೀಮತಿ ಅನಸೂಯ ಗಜಾನನ ಶರ್ಮ.—ನನ್ನ ಪ್ರಶ್ನೆಗೆ ಸರ್ಕಾರದಿಂದ ಉತ್ತರ ಬರಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಜಿಲ್ಲಾಧಿಕಾರಿಗಳ ಜೊತೆ ಸಂಪರ್ಕ ಬೆಳೆಸಿ ಕಾರವಾರದಲ್ಲಿ ಯಾವರೀತಿ ಕ್ರಮ ತೆಗೆದುಕೊಳ್ಳಬಹುದು ಎಂಬುದನ್ನು ನೋಡುತ್ತೇವೆ.

ಶ್ರೀ ಕೆ. ರಾಮಭಟ್.—೩೧೭ ಜನ ಸ್ಥಳೀಯ ಅಭ್ಯರ್ಥಿಗಳನ್ನು ಕೆಲಸದಿಂದ ತೆಗೆದಿರುವ ಬಗ್ಗೆ ನಾನು ಪ್ರತಿದಿವಸ ಪ್ರಸ್ತಾಪ ಮಾಡುತ್ತಿದ್ದೇನೆ. ನಾನು ಆ ಬಗ್ಗೆ ಅಲ್ಪ ಕಾಲಾವಧಿಯ ಪ್ರಶ್ನೆಯನ್ನೂ ಕೊಟ್ಟಿದ್ದೇನೆ, ನನಗೆ ಉತ್ತರ ಸಿಗುತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಶ್ರೀರಾಮಭಟ್ಟರು ನನ್ನ ಛೇಂಬರ್‌ಗೆ ಬರುತ್ತೇನೆ ಎಂದು ಹೇಳಿದ್ದರು. ಆದರೆ ಬರಲಿಲ್ಲ. ಶ್ರೀ ಕೊಡಗಿಯವರು ಬಂದಿದ್ದರು. ಅವರ ಹತ್ತಿರ ನಾನು ಹೇಳಿದ್ದೇನೆ. ಪಿ.ಎಸ್.ಸಿ. ಕ್ಯಾಂಡಿಡೇಟ್ಸ್‌ಗೆ ಟರ್ಮಿನೇಟ್ ಮಾಡಿದ್ದಾರೆ ಎಂಬವಾದ ಇತ್ತು. ಅವರಿಗೆ ನಾವು ಯಾವರೀತಿಯಾದರೂ ಅಕಾಮೊಡೇಟ್ ಮಾಡಬೇಕಾಗುತ್ತದೆ, ಮಾಡುತ್ತೇವೆ. ಆದರೆ ಲೋಕಲ್ ಕ್ಯಾಂಡಿಡೇಟ್ಸ್‌ಗೆ ಒಂದು ಕಡೆ ರೆಗ್ಯುಲರೈಸ್ ಮಾಡಿದರೆ ಬೇರೆ ಕಡೆಯೂ ಮಾಡಬೇಕಾಗುತ್ತದೆ. ಅದನ್ನು ಮಾಡುವುದಕ್ಕಾಗುವುದಿಲ್ಲ. ವೇಕೆನ್ಸಿ ಇರುವ ಕಡೆ ಮುಂದುವರೆಸಿ ಎಂದು ಹೇಳಿದ್ದೇವೆ. ಅದನ್ನು ಮಾಡಿದ್ದಾರೆ. ಇಲ್ಲದೇ ಇರುವ ಕಡೆ ಟರ್ಮಿನೇಟ್ ಮಾಡಿದ್ದಾರೆ. ಲೋಕಲ್ ಕ್ಯಾಂಡಿಡೇಟ್ಸ್ ಬಗ್ಗೆ ಜನರಲ್ಲಾಗಿ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಕೆ. ರಾಮಭಟ್.—೧೮೫ ಹುದ್ದೆಗಳು ಖಾಲಿ ಇವೆ. ಖಾಲಿ ಇರುವ ಸ್ಥಾನಕ್ಕೆ ಅವರನ್ನು ಹಾಕುವ ಆಶ್ವಾಸನೆ ಕೊಡಲಿ.

ಶ್ರೀ ಎಂ ಮಲ್ಲಿಕಾರ್ಜುನ ಖಾರ್ಗೆ.—ಲೋಕಲ್ ಕ್ಯಾಂಡಿಡೇಟ್ಸನ್ನು ರೆಗ್ಯುಲರೈಸ್ ಮಾಡುವುದಕ್ಕಾಗುವುದಿಲ್ಲ ಅನೇಕ ರಿಸರ್ವೇಷನ್ಸ್ ಮುಂತಾದ ವಿಷಯಗಳಿಗೆ ಹೊಡೆತ ಬೀಳುತ್ತದೆಂದು ಸರ್ಕಾರ ರೆಗ್ಯುಲರೈಸ್ ಮಾಡಿಲ್ಲ. ಆದರೆ ಅವರಿಗೆ ಮತ್ತು ಸ್ಪೆಷಂಡರಿ ಗ್ರಾಜುಯೇಟ್‌ಗಳಿಗೆ ಮುಂದೆ ಭರ್ತಿ ಮಾಡುವಾಗ ಆದ್ಯತೆ ಕೊಡಬೇಕೆಂಬ ವಾದ ಇದೆ. ಸರ್ಕಾರ ಆ ಬಗ್ಗೆ ಪಾಲಿಸಿಯನ್ನೂ ಡಿಕ್ಲೇರ್ ಮಾಡಿದೆ.

ಶ್ರೀ ಡಿ. ಜಯದೇವರಾಜ ಅರಸ್.—ಮೇಲ್ಮನೆಯಲ್ಲಿ ನನ್ನ ಹೆಸರನ್ನು ಪ್ರಸ್ತಾಪ ಮಾಡಿ ನನ್ನ ಗೌರವಕ್ಕೆ ಚ್ಯುತಿ ತಂದಿದ್ದಾರೆ. ನಂಜನಗೂಡಿನಲ್ಲಿ ೭ ಸಾವಿರ ಕ್ವಿಂಟಾಲ್ ಬತ್ತದ ಅವ್ಯವಹಾರದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅದಕ್ಕೂ ನನಗೂ ಏನೂ ಸಂಬಂಧವಿಲ್ಲ. ಸಂಬಂಧವಿದ್ದರೆ ಆ ವಿಚಾರವನ್ನು ಸರ್ಕಾರದ ಗಮನಕ್ಕೆ ಮೊದಲು ತಂದವನು ನಾನು. ಆದರೆ ಆ ಸಂಬಂಧವನ್ನು ನನಗೆ ಕಲ್ಪಿಸಿ ಹೇಳಿರುವುದು ಸತ್ಯಕ್ಕೆ ದೂರವಾದುದು. ಆ ತರಹ ಕೆಲಸ ಆಗಬಾರದಾಗಿತ್ತು ಎಂದು ವಿಷಾದದಿಂದ ಹೇಳುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ನಾನು ಮೂರು ನಾಲ್ಕು ವಾರಗಳ ಹಿಂದೆ ಮೆಡಿಕಲ್ ಕಾಲೇಜು ಅಡ್ಮಿಷನ್ ಬಗ್ಗೆ ರೂಲ್ ೩೧೨ರ ಕೆಳಗೆ ನೋಟೀಸ್ ಕೊಟ್ಟಿದ್ದೇನೆ. ಮಾನ್ಯ ಆರೋಗ್ಯ ಮಂತ್ರಿಗಳು ಮತ್ತು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿ ಅದನ್ನು ಪ್ರಸ್ತಾಪ ಮಾಡಲು ಅವಕಾಶ ಕೊಡುವ ಬಗ್ಗೆ ಚರ್ಚೆ ಮಾಡಿದ್ದೇನೆ. ಅದು ಮಹತ್ವದ ಪ್ರಶ್ನೆ ಇದೆ. ಅದನ್ನು ದಯವಿಟ್ಟು ತೆಗೆದುಕೊಳ್ಳಬೇಕು ಅದರಲ್ಲಿ ನಾನಾ ವಿಷಯಗಳು ಅಡಕವಾಗಿದೆ. ಬಹಳ ಗಂಭೀರವಾದ ವಿಷಯಗಳಿವೆ. ನಾನು ಈ ಬಗ್ಗೆ ಪದೇ ಪದೇ ಕಚೇರಿಯಲ್ಲಿ ತಿಳಿಸಿದ್ದೇನೆ. ಆದ್ದರಿಂದ ಅದಕ್ಕೆ ತಾವು ಅವಕಾಶ ಮಾಡಿಕೊಡಬೇಕು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಬೊಮ್ಮಾಯಿಯವರು ಪ್ರಸ್ತಾಪ ಮಾಡಿರತಕ್ಕ ವಿಷಯದಲ್ಲಿ ನಾನೂ ನಿನ್ನೆ ೩೧೨ರ ಪ್ರಕಾರ ಒಂದು ನೋಟೀಸನ್ನು ಕಳುಹಿಸಿಕೊಟ್ಟೆ. ಕೊನೇ ದಿವಸವಾಗಿರುವುದರಿಂದ ಹಲವಾರು ವಿಷಯಗಳನ್ನು ನಾವು ಪ್ರಸ್ತಾಪ ಮಾಡುತ್ತಿದ್ದೇವೆ. ಮಾನ್ಯ ಅಧ್ಯಕ್ಷರು ಕ್ಷಮಿಸಬೇಕು. ಈ ಸರ್ಕಾರ ರಚನೆಯಾದಮೇಲೆ ೧೯೮೦ ರಿಂದ ಮೆಡಿಕಲ್ ಕಾಲೇಜುಗಳು ಮತ್ತು ಇಂಜಿನಿಯರಿಂಗ್ ಕಾಲೇಜುಗಳು ಏನು ಮಂಜೂರಾಗಿವೆ ಅದರ ಪ್ರವೇಶಕ್ಕೆ ಕರ್ನಾಟಕ ರಾಜ್ಯದ ಮತ್ತು ಹೊರಗಿನ ವಿದ್ಯಾರ್ಥಿಗಳಿಗೆ ಎಷ್ಟೆಷ್ಟು ಕ್ಯಾಪಿಟೇಷನ್ ಶುಲ್ಕ ತೆಗೆದುಕೊಳ್ಳಬೇಕು ಎಂಬುದು ನಿಗದಿಯಾಗಿದೆ. ತಮಗೆ ಗೊತ್ತಿರುವಹಾಗೆ ಕರ್ನಾಟಕ ರಾಜ್ಯದಲ್ಲಿರುವ ವಿದ್ಯಾರ್ಥಿಗಳಿಗೆ ಮೆಡಿಕಲ್ ಕಾಲೇಜ್ ಅಡ್ಮಿಷನ್ಸ್‌ಗೆ.....

ಅಧ್ಯಕ್ಷರು.—ಸರ್ಕಾರಕ್ಕೆ ಕಳುಹಿಸಿದ್ದೀವೆ, ಅದಕ್ಕೆ ಸರ್ಕಾರದಿಂದ ಉತ್ತರ ಬರಲಿಲ್ಲ. ನಂತರ ಪ್ರಸ್ತಾಪ ಮಾಡಿ. ಅಜೆಂಡಾದಲ್ಲಿರುವ ವಿಷಯಗಳು ಮುಗಿಯಲಿ. ಆಮೇಲೆ ನೋಡೋಣ.

ಶ್ರೀ ಎಸ್. ಬಂಗಾರಪ್ಪ.—ಆಮೇಲೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟ, ಪರ್ವಾಗಿಲ್ಲ.

SRI A. LAXMISAGAR.—There are number of issues involved here. We are only trying to impress upon the Government through you of the necessity of taking up this matter. That is the point. Some time must be found today.

ಶ್ರೀ ಎಸ್.ಎಂ. ಶೀರ್ನಾಳಿ ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೆ...

ಅಧ್ಯಕ್ಷರು—ಕುಳಿತುಕೊಳ್ಳಿ, ನಿಮ್ಮನ್ನು ನಾನು ಕರೆಯುತ್ತೇನೆ. ನಾನು ಕರೆದಾಗ ನೀವು ಹೇಳಿ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್—ಆಮೇಲೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ ಪ್ರಶ್ನೋತ್ತರವಾದಮೇಲೆ ನಿಯಮದ ಪ್ರಕಾರ ತೆಗೆದುಕೊಳ್ಳಬೇಕು.

ಅಧ್ಯಕ್ಷರು.—ಯಾರು ಹೇಳಿದ್ದು ? ದಿನಾ ಲೋಕಸಭೆಯಲ್ಲಿ ನಡೆಯುವುದನ್ನು ಪತ್ರಿಕೆಯಲ್ಲಿ ನೋಡುವುದಿಲ್ಲವೆ ?

ಶ್ರೀ ಎಸ್.ಎಂ. ಶೀರ್ನಾಳಿ ಚಂದ್ರಶೇಖರ್.—ಮಾನ್ಯ ಕಾನೂನು ಮಂತ್ರಿಗಳು ಬರಲಿ ಎಂದು ಹೇಳಿದ್ದಿರಿ. ಅವರು ಬಂದಿದ್ದಾರೆ. ರೆಗ್ಯುಲರ್ ಬಿಸಿನೆಸ್ ಶುರುವಾದಮೇಲೆ ತೆಗೆದು ಕೊಳ್ಳುವುದಕ್ಕಾಗುವುದಿಲ್ಲ.

ಅಧ್ಯಕ್ಷರು.—ನಾನು ಅವರನ್ನೂ ನೋಡಿದ್ದೇನೆ, ತಮ್ಮನ್ನೂ ನೋಡಿದ್ದೇನೆ.

ಶ್ರೀ ಶೀರ್ನಾಳಿ ಚಂದ್ರಶೇಖರ್.—ಆದ್ದರಿಂದ ಈಗ.....

ಅಧ್ಯಕ್ಷರು.—ತಮ್ಮ ಜೊತೆ ವಾದ ಮಾಡುವುದಕ್ಕೆ ನನಗೆ ಸಾಧ್ಯವಾಗುವುದಿಲ್ಲ. ತಾವು ಕುಳಿತುಕೊಳ್ಳಿ, ನಾನು ಕರೆಯುತ್ತೇನೆ.

ಶ್ರೀ ಎಸ್. ಬಂಗಾರಪ್ಪ ,—ಮಾನ್ಯ ಅಧ್ಯಕ್ಷರೇ ಈ ವಿಷಯದಲ್ಲಿ ಅವರು ಹೇಳಿಕೆಯನ್ನು ಕೊಡುತ್ತಾರೋ ಅಥವಾ ಏನು ವಿಷಯ ಅಂಥ ತಿಳಿಸಿದರೆ ಒಳ್ಳೆಯದು.

ಅಧ್ಯಕ್ಷರು.— ಅದನ್ನು ಸರ್ಕಾರಕ್ಕೆ ಕಳುಹಿಸಿದ್ದೇನೆ. ಅದರ ಬಗ್ಗೆ ಇನ್ನೂ ಏನೂ ಬಂದಿಲ್ಲ ಮತ್ತೆ ಪ್ರಸ್ತಾಪ ಮಾಡುತ್ತೇನೆ. Let us take the formal agenda... ..

ಶ್ರೀ ಎಂ. ಚಂದ್ರಶೇಖರ್.— ಸನ್ಮಾನ್ಯ ಅಧ್ಯಕ್ಷರೇ, ಕೆಲವು ದಿವಸಗಳ ಹಿಂದೆ ಒಬ್ಬ ಪ್ರಖ್ಯಾತ ಹಿಂದಿ ಫಿಲಮ್‌ಸ್ಟಾರ್ ಅಮಿತಾಬ್ ಬಚ್ಚನ್ ಅವರಿಗೆ ಚಿತ್ರ ತೆಗೆಯುವಾಗ ಒಂದು ಆಕ್ಸಿಡೆಂಟ್ ಆಗಿ ಕರುಳಿಗೆ ಏಟು ಬಿದ್ದು ರಕ್ತಸ್ರಾವ ಆಯಿತು. ಮೂರು ನಾಲ್ಕು ದಿವಸದಿಂದ ಇಲ್ಲೇ ಆಸ್ಪತ್ರೆಯಲ್ಲಿ ಟ್ರೀಟ್ ಮಾಡುತ್ತಿರಬೇಕಾದರೆ ಈ ರಕ್ತಸ್ರಾವ ನಿಲ್ಲಿಸುವಂಥ ಬ್ಲಡ್ ಕ್ಲಾಂಟಿಗ್‌ಗೆ ಬೇಕಾಗಿರುವಂಥ ಇಂಟ್ರಾವಿನಸ್ ಬ್ಲಡ್ ಪ್ಲೇಟ್‌ಲೆಟ್ ಅಂಥ ಏನು ಔಷಧ ಇದೆ ಅದು ಕರ್ನಾಟಕದ ಬೆಂಗಳೂರಿನಲ್ಲಿ ದೊರಕದೇ ಇರುವುದರಿಂದ ಪ್ರತಿ ದಿವಸ ಬೊಂಬಾಯಿ ಮತ್ತು ಮದ್ರಾಸಿನಿಂದ ತರಿಸಬೇಕಾಗಿ ಬಂತು. ಅವರು

ಬಹಳ ಪ್ರಮುಖ ವ್ಯಕ್ತಿಯಾಗಿರುವುದರಿಂದ, ಪ್ರಧಾನ ಮಂತ್ರಿಗಳಿಂದ ಹಿಡಿದು ನಮ್ಮ ಮಾನ್ಯ ರಾಜ್ಯ ಪಾಲರು ಮಾನ್ಯ ಮುಖ್ಯಮಂತ್ರಿಗಳು ಹೋಗಿ ವಿಚಾರ ಮಾಡಿಕೊಂಡು ಬರುವಂಥ ವ್ಯಕ್ತಿಯಾಗಿರುವುದರಿಂದ ಅಲ್ಲಿಂದ ಔಷಧಿಯನ್ನು ತರಿಸಿ ಔಷಧೋಪಚಾರ ಮಾಡಲಿಕ್ಕೆ ಸಾಧ್ಯವಾಯಿತು. ನಮ್ಮ ರಾಜ್ಯದಲ್ಲಿ ಪ್ರತಿದಿವಸ ಆಕ್ಸಿಡೆಂಟ್ ಆಗುವುದರಿಂದ ಆ ತರಹ ರಕ್ತಸ್ರಾವ ಆಗುವಂಥ ಕೇಸುಗಳು ಬಹಳ ಇರುತ್ತವೆ. ಅವರಿಗೆ ಇಂಥ ಒಂದು ಅನುಕೂಲ ಕಲ್ಪಿಸಿಕೊಡಲಿಕ್ಕೆ ಅವಕಾಶ ಇದೆಯೇ ? ಅದು ಇಲ್ಲದೇ ಇರುವುದರಿಂದ ಅವರನ್ನು ಬೊಂಬಾಯಿಗೆ ರವಾನಿಸಲಾಗಿದೆ. ಆದ್ದರಿಂದ ನಮ್ಮ ಕರ್ನಾಟಕದಲ್ಲಿ ಈ ಬಗ್ಗೆ ಸರ್ಕಾರ ಏನು ವ್ಯವಸ್ಥೆ ಮಾಡುತ್ತದೆ ಎನ್ನುವುದನ್ನು ಹೇಳಬೇಕು. ಈಗ ಅಂಥ ಸಂದರ್ಭದಲ್ಲಿ ಬೇಕಾಗುವಂಥ ಔಷಧ ಏನಿದೆ ಅದು ಮದ್ರಾಸ್ ಕ್ಷಬಾಂಬೆ, ಕಲ್ಕತ್ತದಿಂದ ತರಿಸದೆ, ಆ ಬಗ್ಗೆ ಬೆಂಗಳೂರಿನಲ್ಲಿ ಸರಿಯಾದಂಥ ವ್ಯವಸ್ಥೆ ಮಾಡಬೇಕು. ಇದರ ಬಗ್ಗೆ ಇದನ್ನು ಅನುಭವಿಸಿದವರು, ಡಾಕ್ಟರ್ ತಿಮ್ಮೇಗೌಡರ ಒಂದು ಕೇಸು ಇದೆ. ಅದರ ಬಗ್ಗೆ ಮಾನ್ಯ ತಿಮ್ಮೇಗೌಡರು ವಿಚಾರ ತಿಳಿಸುತ್ತಾರೆ, ದಯಮಾಡಿ ಕೇಳಬೇಕು.

ಶ್ರೀ ಹೆಚ್. ಎಲ್. ತಿಮ್ಮೇಗೌಡ.— ಔಷಧಿ ಏನೂ ಬೇಕಾಗುವುದಿಲ್ಲ. ರಕ್ತದಲ್ಲಿ ಕೆಂಪು ರಕ್ತಕಣಗಳು, ಬಿಳಿ ರಕ್ತಕಣಗಳು, ಪ್ಲೇಟ್‌ಲೆಟ್ ಇರುತ್ತದೆ. ಅವರಿಗೆ ಬೇಕಾದಂಥ ಪ್ಲೇಟ್‌ಲೆಟ್ ಮಾತ್ರ ಕಡಿಮೆ ಆದಾಗ ಆಗ ಬದಲಾಯಿಸಿ ಕೊಡಬೇಕಾಗುತ್ತದೆ. ಈ ಬ್ಲಡ್‌ಸೆಲ್ ಸೆಪರೇಟ್ ಮೆಷಿನ್ ಅನ್ನುತಕ್ಕ ಒಂದು ಮೆಷಿನ್ ಇದೆ. ಅದು ಐದಾರು ಲಕ್ಷ ರೂಪಾಯಿ ಬೆಲೆ ಬಾಳುವ ಮೆಷಿನ್ ಇರಬಹುದು. ಆ ಮೆಷಿನ್ ನಮ್ಮ ರಾಜ್ಯದಲ್ಲಿ ಇಲ್ಲದೇ ಇರುವುದರಿಂದ ಈ ತರಹ ಆಕ್ಸಿಡೆಂಟ್ ಆದಸಮಯದಲ್ಲಿ ರಕ್ತಸ್ರಾವ ಹೆಚ್ಚಾಗಿ ಸಾವಿಗೆ ಕಾರಣರಾಗುತ್ತಾರೆ. ಆದ್ದರಿಂದ ಸರ್ಕಾರದ ವತಿಯಿಂದ ಐದಾರು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಈ ತರಹ ಒಂದು ಮೆಷಿನ್ ತರಿಸುತ್ತೇವೆಂದು ಮಾನ್ಯ ಮಂತ್ರಿಯವರು ಆಶ್ವಾಸನೆ ಕೊಟ್ಟರೆ ಸಾಕು.

ಅಧ್ಯಕ್ಷರು.— ನಾನು ಸರ್ಕಾರಕ್ಕೆ ಕಳುಹಿಸಿದ್ದೇನೆ. ಇವೊತ್ತು ಹೆಲ್ತ್ ಮಿನಿಸ್ಟರ ಇಲ್ಲ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.— ನನಗೆ ಇದು ಬೇಕಾದ್ದೆ ಸ್ವಾಮಿ, ನಾನು ಬಾಂಬೆಯಿಂದ ಮೂರು ದಿವಸ ವಿಮಾನದಲ್ಲಿ ತರಿಸಬೇಕಾಯಿತು.

ಶ್ರೀ ವೈ. ರಾಮಕೃಷ್ಣ.— ಮಾನ್ಯ ಸದಸ್ಯರು ಸ್ವೀಕರಿಸಬೇಕಾದಂಥ ಸಲಹೆಯನ್ನು ಕೊಟ್ಟಿದ್ದಾರೆ. ನಾವು ಅವರ ಸಲಹೆಯನ್ನು ಸ್ವೀಕರಿಸಿ ಎಕ್ಸಾಮಿನ್ ಮಾಡುತ್ತೇವೆ. ಆ ಒಂದು ಮೆಷಿನ್ ಅವಶ್ಯಕತೆ ಇದ್ದರೆ ತರಿಸೋಣ.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಅಧ್ಯಕ್ಷರೇ, ನಾನು ಮೊತ್ತಂದು ನೋಟೀಸ್ ಕೊಟ್ಟಿದ್ದೆ, ಅದು ಬೆಂಗಳೂರು ನಗರದಲ್ಲಿರತಕ್ಕ ಪೌರಕಾರ್ಮಿಕರ ವಿಚಾರದ ಬಗ್ಗೆ.

ಅಧ್ಯಕ್ಷರು.— ತಾವು ಯಾವಾಗ ಕೊಟ್ಟಿದ್ದೀರಿ ?

ಶ್ರೀ ಎಸ್. ಬಂಗಾರಪ್ಪ.— ನಿನ್ನೆ ಕಳುಹಿಸಿದ್ದೇನೆ. ಮಾನ್ಯ ಪೌರಾಡಳಿತ ಸಚಿವರು ಇಲ್ಲೇ ಇದ್ದಾರೆ, ಆದ್ದರಿಂದ ಅದನ್ನು ಪ್ರಸ್ತಾಪ ಮಾಡಬೇಕಾಗಿದೆ. ಇದು ಬಹಳ ಸಣ್ಣ ವಿಚಾರ, ಆದರೂ ಇದಕ್ಕೆ ಬಹಳ ಅರ್ಜೆಂಟ್ ಇದೆ. ನನಗೆ ಗೊತ್ತಿರುವ ಹಾಗೆ ಕಸ ಗುಡಿಸುವಂಥ ಪೌರ ಕಾರ್ಮಿಕರನ್ನು ನೇಮಕ ಮಾಡಿಕೊಳ್ಳಲಿಕ್ಕೆ ಕಾರ್ಪೊರೇಷನ್‌ನಲ್ಲಿ ೧೮೦೦ ಹುದ್ದೆಗಳಿಗೆ ಅರ್ಜಿಯನ್ನು ಕರೆದಿದ್ದಾರೆ. ಆ ಬಗ್ಗೆ ಸುಮಾರು ೩೦ ಸಾವಿರ ಅರ್ಜಿಗಳು ಬರುತ್ತಿವೆ. ಅದರಲ್ಲಿ ಹೆಚ್ಚಾಗಿ ಕಸ ಗುಡಿಸುವವರು ಅಂದರೆ ಹರಿಜನ ಗಿರಿಜನ ವರ್ಗದವರೇ ಇರುತ್ತಾರೆ. ನಾನು ಅವರು ಅರ್ಜಿ ಕರೆದಿರುವುದು ತಪ್ಪು ಎಂದು ಹೇಳುವುದಿಲ್ಲ. ಇವೊತ್ತು ಅವರಿಗೆ ಆಗತಕ್ಕ ಖರ್ಚು ಏನಿದೆ ಅದು ಮಿಡಲ್‌ಮೆನ್‌ಗಳಿಂದ ಜಾಸ್ತಿಯಾಗಿ ಅವರಿಗೆ ತೊಂದರೆಯಾಗಿದೆ. ಒಬ್ಬೊಬ್ಬರು ೨೦೦–೩೦೦–೪೦೦ ರೂಪಾಯಿಗಳಷ್ಟು ಖರ್ಚು ಮಾಡುತ್ತಿದ್ದಾರೆ ಅಫಿಡವಿಟ್ ಸರ್ಟಿಫಿಕೇಟ್ ಕ್ಯಾಸ್ಟ್ ಸರ್ಟಿಫಿಕೇಟ್ ಇವೆಲ್ಲಾ ಬೇಕಾಗುತ್ತದೆ ನಾನು ಬೇಡ ಎಂದು ಹೇಳುವುದಿಲ್ಲ. ಈ ವ್ಯವಸ್ಥೆಯನ್ನೆಲ್ಲಾ ತಪ್ಪು ಕಾರ್ಪೊರೇಷನ್ ಆಫೀಸ್‌ನಲ್ಲಿ ಒಂದೇ ಕಡೆ ಮಾಡಿದರೆ, ಹರಿಜನ ಗಿರಿಜನರಿಗೆ, ಕಸ ಗುಡಿಸಲು ಬರತಕ್ಕವರಿಗೆ ಒಳ್ಳೆಯ ಉಪಕಾರ ಮಾಡಿದಂತಾಗುತ್ತದೆ. ಈಗ ಇರತಕ್ಕಂಥಾದ್ದು ಒಂದು ಅಫಿಡವಿಟ್ ಕ್ಯಾಸ್ಟ್ ಸರ್ಟಿಫಿಕೇಟ್ ಬೇಕು ಅಂದರೆ ಅವರು ತಹಶೀಲ್ದಾರ್‌ರವರ ಕಚೇರಿಗೆ ಹೋಗಬೇಕು, ಹಣ ಖರ್ಚು ಮಾಡಬೇಕು. ಅವರು ಈ ಎಲ್ಲಾ ಸರ್ಟಿಫಿಕೇಟ್‌ಗಳನ್ನು ಪಡೆಯಬೇಕು ಅಂದರೆ ೨೮ ಆಫೀಸುಗಳಿಗೆ ಓಡಾಡಬೇಕಾಗಿರುತ್ತದೆ. ತಾವು ಇವೆಲ್ಲಾ

ಒಂದೇ ಕಡೆ ಒದಗಿಸಲಿಕ್ಕೆ ವ್ಯವಸ್ಥೆ ಮಾಡಿದರೆ ಅವರಿಗೆ ಹಣ ಖರ್ಚು ಮಾಡುವುದು ತಪ್ಪಿಸಬಹುದು ಈ ಹರಿಜನ ಗಿರಿಜನ ಏನಿದ್ದಾರೆ ಅವರುಗಳಿಗೆ ಅನುಕೂಲ ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳಬೇಕು. ಇವೊತ್ತು ಸುಮಾರು ೩೦ ಸಾವಿರ ಅರ್ಜಿಗಳು ಬರುತ್ತಿವೆ. ಅದರಲ್ಲಿ ಅವರು ಒಂದು ರೂಪಾಯಿ ಆರ್ಜಿಗೆ ಕೊಡಬೇಕು, ೨ ರೂಪಾಯಿ ೪೦ ಪೈಸೆ ಪೋಸ್ಟಲ್ ಆರ್ಡರ್ ಈ ರೀತಿ ಖರ್ಚುಮಾಡಬೇಕಾಗಿದೆ.

ಅಧ್ಯಕ್ಷರು.— ಮಾನ್ಯ ಸದಸ್ಯರು ನಿನ್ನೆ ದಿವಸ ಕೊಟ್ಟಿದ್ದೀವೆ ಅಂಥ ಹೇಳುತ್ತಿದ್ದೀರಿ, ನಾನು ಕೂಡ ತಮ್ಮ ನೋಟೀಸ್ ನೋಡಿಲ್ಲ, ಈಗ ತಕ್ಷಣ ಹೇಳಿದರೆ ಅವರು ಉತ್ತರ ಹೇಗೆ ಕೊಡಬೇಕು ?

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಅಧ್ಯಕ್ಷರೇ ನಾಳೆ ಲಾಸ್ಟ್ ಡೇ. ಆದ್ದರಿಂದ, ಈ ಬಗ್ಗೆ ಮಾನ್ಯ ಮಂತ್ರಿಯವರು ತಕ್ಷಣ ಕ್ರಮ ತೆಗೆದುಕೊಳ್ಳಲಿ ಎಂದು ಹೇಳುತ್ತಿದ್ದೇನೆ. ಏಕೆಂದರೆ, ಅಲ್ಲಿ ಖರ್ಚು ಅಥವಾ ಲಂಚಕ್ಕೆ ಅವಕಾಶ ಇಲ್ಲದಂತೆ ಕ್ರಮ ತೆಗೆದುಕೊಳ್ಳಬೇಕಾಗಿದೆ. ಆದ್ದರಿಂದ ಇದನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಧರ್ಮಸಿಂಗ್ — ಈಗ ಅರ್ಜಿಗಳನ್ನು ಕರೆದಿದ್ದೇವೆ. ಅದಕ್ಕೆ ಅವಶ್ಯಕವಾದ ಸರ್ಟಿಫಿಕೇಟ್ ನ್ನು ಕೂಡ ಕೊಡಬೇಕೆಂದು ಹೇಳಿದ್ದೇವೆ. ಈಗ ಮಾನ್ಯ ಸದಸ್ಯರು ಅರ್ಜಿ ಸಲ್ಲಿಸುವವರಿಗೆ ಅದರಿಂದ ತೊಂದರೆಯಾಗುತ್ತಿದೆ ಎನ್ನುವ ವಿಚಾರವನ್ನು ತಿಳಿಸಿದ್ದಾರೆ. ನಾನು ಆ ಬಗ್ಗೆ ಕಾರ್ಪೊರೇಷನ್ ಕಮಿಷನರ್ ಜೊತೆ ಮಾತನಾಡಿ ಅದನ್ನು ಎಲ್ಲಿಯವರೆಗೆ ನಿಲ್ಲಿಸಲಿಕ್ಕೆ ಆಗುತ್ತದೆ ಎಂಬುದನ್ನು ಯೋಚನೆ ಮಾಡಿ, ಅದಕ್ಕೆ ತಕ್ಕ ವ್ಯವಸ್ಥೆ ಮಾಡುತ್ತೇನೆ.

PAPERS LAID ON THE TABLE

SRI Y. RAMAKRISHNA (Minister for Law and Parliamentary Affairs and Animal Husbandry)- On behalf of the Chief Minister, I beg to lay on the Table of the House

(i) Order No. HD 230 CNA 82, dated 24th July 1982

Exemption of tax for the exhibition of 35 mm. feature films/ slides of Scientific or educational value and documentary films by M/s. C F.T.R.I Mysore

(ii) Order No. HD 133 CNA 81, dated 24th July 1982

Exemption of tax for the exhibition of 35 mm. feature films by M/s. Karnataka Electricity Board at Mahatma Gandhi Hydro Electrical Works, K.F.B. Colony, Jog Fills and at C.P.S. Club, Shivasamudram.

(iii) Order No. HD 241 CNA 81, dated 24th July 1982

Exemption of tax for the exhibition of 35 mm. feature films by the Central Institute of Indian Languages, Mysore

as required under Section 22 of Karnataka Cinemas (Regulation) Act, 1964.

MR. SPEAKER.—Papers laid.

SRI MALLIKARJUN KHARGE (Minister for Revenue)—Sir, I beg to lay